ಸಂಚಾರಕ್ಕೆ ಕಾರಣವಾಗುತ್ತದೆ. ಚಿಲ್ಲಾದ ದಿನಗಳಲ್ಲಿ ಗಂಧರ್ವರೋ, ಅಥವಾ ಜಿನ್‌ಗಳೋ ಯಾವುದೋ ಹೊತ್ತಲ್ಲಿ ನಮ್ಮ ಬಳಿ ಬಂದು ನಮ್ಮ ಗಾಯನಕ್ಕೆ ಅಮೋಘವಾದ ಛಾಪು ಕೊಟ್ಟು ಹೋಗುತ್ತಾರೆ ಎಂದು ಹೇಳುವವರೂ ಇದ್ದಾರೆ.

ಸೋಹನಿ, ಪುರಿಯಾ ಮತ್ತು ಮಾರವಾ ರಾಗಗಳಲ್ಲಿ ಬಳಕೆಯಾಗುವ ಸರೆಗಮದನಿ ಸ್ವರಗಳು ಒಂದೇ. ಮೂರೂ ರಾಗಗಳೂ ಸಾಮಾನ್ಯ ಸಂಗೀತ ಶ್ರೋತೃಗಳು ಕೇಳಿದರೆ ಬೇರೆ ಬೇರೆ ಎಂದು ವರ್ಗೀಕರಿಸಲಾರರು. ಹೆಚ್ಚು ಕಡಿಮೆ ಒಂದೇ ರೀತಿಯ ರಾಗಗಳಾದರೂ ಅವುಗಳಿಂದ ಉತ್ಪತ್ತಿಯಾಗುವ ರಸ ಮತ್ತು ಭಾವಗಳಲ್ಲಿ ಸೂಕ್ಷ್ಮ ವ್ಯತ್ಯಾಸಗಳಿವೆ. ಉಸ್ತಾದರು ಹಾಡಿದಾಗಲೇ ಮೂರೂ ರಾಗಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸ ಮಿಹಿರನಿಗೆ ಮೊದಲಬಾರಿ ಸ್ಪಷ್ಟವಾದದ್ದು. ಅದಕ್ಕೇ ಅವನು ಮನಸೋತದ್ದು. ಕೆಲವರಂತೂ ಹೆಸರಿಗಷ್ಟೇ ಮಾರವಾ, ಪುರಿಯಾ, ಸೋಹನಿ ಎನ್ನುವರು. ಹಾಡುವಾಗ ಎಲ್ಲವೂ ಒಂದೇ. ಆದರೆ, ನಿಜಕ್ಕೂ ಸ್ವರ ನ್ಯಾಸದ ಸ್ಥಳಗಳು, ಆಲಾಪದ ರೀತಿ ತಾನುಗಳ ರಚನೆ ಎಲ್ಲವೂ ಒಂದೊಂದರಲ್ಲೂ ಭಿನ್ನ. ಮಿಹಿರ ಈ ಬಗ್ಗೆ ಒಮ್ಮೆ ಸಂಶಯ ಕೇಳಿದ್ದ ಗುರುಗಳಲ್ಲಿ. 'ಸ್ವರಗಳು ಒಂದೇ ನಿಜ ಮಿಹಿರಾ. ಒಂದೇ ಹಿಟ್ಟಿನಿಂದ ಚಪಾತಿ, ಪರೋಟ, ಮತ್ತು ನಾನ್ ಗಳು ತಯಾರಾಗುತ್ತವೆ. ಎಲ್ಲದರ ರುಚಿ ಒಂದೇ ರೀತಿ ಇರುತ್ತದೆಯೇ?' ಎಂದು ಗುರುಗಳು ಮರು ಪ್ರಶ್ನಿಸಿದ್ದರು. ಹಿಟ್ಟಿನ ಬಗ್ಗೆ ಹೇಳುವಾಗ ಮಿಹಿರನಿಗೆ ಅಪ್ಪನ ಗೋಧಿ ಹೊಲ ನೆನಪಾಯಿತು. ತಾನೂ ಗೋಧಿ ಬೆಳೆಯಬೇಕು ಎಂಬುದು ಅಪ್ಪನ ಆಸೆ. 'ಸುಮ್ಮನೆ ಗೋಧಿ ಬೆಳಿ. ಗಾಯನ ಮಾರ್ಗ ಗೋಧಿಹಿಟ್ಟಿಗೂ ಪರದಾಡಿಸುತ್ತೆ. ಅದರಲ್ಲಿ ನಸೀಬು ಲಕ್ಷಕ್ಕೆ ಒಬ್ಬರಿಗೆ ಮಾತ್ರ ಖುಲಾಯಿಸುವುದು. ನಿಮ್ಮ ಉಸ್ತಾದ ಮುಫೀದ್ ಸಾಹೇಬರಿಗೆ ಗಾಣೆಯಲ್ಲಿ ಹೆಸರು ಎಷ್ಟು ಬಂದಿದೆ ಹೇಳು? ಆಮೇಲೆ ನಿನಗೆಲ್ಲಿಂದ ಬಂದೀತು?' ಎಂದು ಅಪ್ಪ ಹೇಳಿದಾಗ ಅಪ್ಪನ ಸಂಗೀತದ ಕುರಿತಾದ ಅಜ್ಞಾನದ ಕುರಿತು ಅವನಿಗೆ ಬೇಸರವೆನ್ನಿಸಿತು.

ಉಸ್ತಾದರು ಸ್ವರ ಹಚ್ಚಿದಾಗ ಗಾಜಿನ ಲೋಟವು ಒಮ್ಮೆ ಅದರ ಧ್ವನಿ ತರಂಗಗಳ ತೀಕ್ಷ್ಣತೆಗೆ ಮಣಿದು ಒಡೆದು ಹೋದದ್ದು ಅವನು ನೋಡಿದ್ದ. ಅದ್ಭುತ ಸೃಷ್ಟಿಸುವ ತಾಕತ್ತು ಇರುವ ಗಾಯನ ಅವರದ್ದು. ಆದರೆ, ಪ್ರಸಿದ್ಧಿಯ ಕೋಟೆಯೊಡೆದು ಒಳಕ್ಕೆ ಹೋಗಲು ಅವರಿಗೆ ಸಾಧ್ಯವಾಗದ್ದು ನಿಜ. ಅದರ ಬಗ್ಗೆ ಉಸ್ತಾದರಿಗೂ ಬೇಸರವಿತ್ತು. ಅದು ಮಿಹಿರನಿಗೂ ಗೊತ್ತಿತ್ತು. 'ನಕಲಿ ಗಾಯಕಿ ತೋರಿಸಿಕೊಂಡು ವ್ವಾ! ವ್ವಾ! ಹೇಳಿಸಿ ಜಮೀನುದಾರರಲ್ಲಿಯೋ, ಸಂಗೀತ ಸಭೆಗಳಲ್ಲೊ ಹೆಸರು ಮಾಡಿದ ಕುಳಗಳಲ್ಲಿ ನಿನ್ನ ಬಳಿ ಇರುವಷ್ಟು ಸರಕು ಕೂಡ ಇಲ್ಲವೊ ಮಿಹಿರ... ಗಾಯನಕ್ಕಿಂತ ಮಾತು ಜಾಸ್ತಿ. ರಾಗ ವಶವಾಗದಿದ್ದರೆ ಅಷ್ಟೆ ಹೋಯಿತು. ಮನುಷ್ಯರನ್ನು ಅದು ಹೇಗೊ ವಶೀಲಿ ಮಾಡಿಕೊಂಡು ಗೆದ್ದು ಬಿಡುತ್ತಾರೆ. ಮಾರವಾ ಹತ್ತು ನಿಮಿಷಕ್ಕೆ ಹಳೆಯದಾಗುತ್ತೆ. ಮತ್ತೆ ಮತ್ತೆ ಅದೇ ಚಲನೆಗಳನ್ನು ಮಾಡಿ ಅದೇ ಪ್ಲೇಟು ಹಚ್ಚಿ ಹಲ್ಲುಗಿಂಜುತ್ತಾರೆ ಅವರೆಲ್ಲ' ಎಂದಿದ್ದರು ಒಮ್ಮೆ. ಮಿಹಿರನಲ್ಲಿ ಸಂಗೀತ ಶಾಸ್ತ್ರದ ಕುರಿತು ಸಹಜ ಕುತೂಹಲವಿದೆ ಎಂದು ಉಸ್ತಾದರಿಗೆ ಅಂದಾಜಾಗಿತ್ತು. ಅವನ ಕಂಠದಲ್ಲಿ ಮಾರವಾ ಕೇಳುವಾಗ ಉಸ್ತಾದರಿಗೆ ಅದೇನೋ ತಾಜಾತನ ಕಂಡುಬರುತ್ತಿತ್ತು. ಅದಕ್ಕೇ ಆ ದಿನ ಚಿಲ್ಲಾ ಬಗ್ಗೆ ಪ್ರಸ್ತಾಪ ಮಾಡಿದ್ದರು. ಹಸುವಿನ ದಪ್ಪ ಹಾಲಿನಂಥ ಮಾರವಾ ರಾಗವನ್ನು ಪ್ರತಿದಿನ ಉಣಿಸುತ್ತಿದ್ದವರು, ಇನ್ನೇನು ಅವನೇ ಮನಸೋ ಇಚ್ಛೆ ಮಾರವಾದ ರಸಪಾನ ಮಾಡಿಕೊಳ್ಳಲು ಶಕ್ತನಾದ ಅಂದುಕೊಳ್ಳುವಾಗ ಅದೇ ಮಾರವಾ ರಾಗದ ಸಾಧನೆಗೆ ಚಿಲ್ಲಾ ವಿಧಿಸಿದ್ದರು. ಅಲ್ಲಿ ಶಿಷ್ಯನ ಒಪ್ಪಿಗೆಯ ಪ್ರಶ್ನೆ ಹುಟ್ಟುವುದೇ ಇಲ್ಲವಾದ್ದರಿಂದ ಮಿಹಿರ ಪ್ರತಿಕ್ರಿಯೆ ನೀಡಲೇ ಇಲ್ಲ.

ಎಂದಿನಂತೆ ಮುಂಜಾನೆ ಅಪ್ಪ ಹೊಲದಿಂದ ಬರುವಾಗ ಅವನು ನದಿಯ ಬಳಿ ಆದಿನವೂ ಹೊರಟ. ಅದು ಗುರುವಿನ ಪಾಠವನ್ನು ಒಳಗಣ್ಣಿನ ಮೂಲಕ ಅವನು ಹಿಗ್ಗಿಸಿನೋಡುವ ಜಾಗ. ಪ್ರಕೃತಿಯ ಮೂಲಕವೇ ಆವಿರ್ಭವಿಸಿದ ಸ್ವರಗಳನ್ನು ತಿದ್ದಿ ತೀಡಿ, ತಿಕ್ಕಿ ಹೊಳೆಸಿ ಸಂತಸ ಪಡುವ ಸಾಧನಾ ತಾಣ. ಮಿಹಿರನದ್ದು ಮೂಲತಃ ಸಾಧಕ ಸ್ವಭಾವ. ಚಿಲ್ಲಾ ಅವನ ಜಾಯಮಾನಕ್ಕೆ ಅಂಥ ದೊಡ್ಡ ಸವಾಲೇನೂ ಆಗಿರಲಿಲ್ಲ. ಮಾರವಾ ಅವನಿಗೆ ಪರಿಚಿತವಷ್ಟೇ ಆಗಿದ್ದದ್ದು ಈಗ ಸ್ನೇಹಿತನಂತೆ ಆಗಿತ್ತು. ಚಿಲ್ಲಾ ಕಳೆಯುವ ಹೊತ್ತಿಗೆ ಆತ್ಮಸಂಗಾತಿಯೇ